

ಅರುಣ ಪಿ. ಭಟ್ಟ

## ವಾರಭವಿಷ್ಯ: 27.06.2024ರಿಂದ 03.07.2024ರವರೆಗೆ




ವಾರದ ಶುರುವಿನಲ್ಲಿ ಉತ್ತಮ ಆದಾಯ. ವರ್ಚಸ್ಸು ವೃದ್ಧಿ ಆಗಲಿದೆ. ಶೈಕ್ಷಣಿಕ ಕ್ಷೇತ್ರದಲ್ಲಿ ನಿರೀಕ್ಷೆಗಿಂತ ಹೆಚ್ಚಿನ ಪ್ರಗತಿ. ಶತ್ರುಗಳ ಉಪಟಳ ಹೆಚ್ಚಾಗಲಿದೆ. ಇದರಿಂದ ಮಾನಸಿಕ ಆತಂಕಕ್ಕೆ ಗುರಿಯಾಗುತ್ತೀರಿ. ವಾರದ ಕೊನೆಯ ಮೂರು ದಿನ ಅನುಕೂಲ ಸನ್ನಿವೇಶ ಇದೆ. ಕೌಟುಂಬಿಕ ಕಲಹ ಏರ್ಪಡಬಹುದು. ಅನಗತ್ಯ ವಾಗ್ವಾದ ಮಾಡಿಕೊಳ್ಳಬೇಡಿ. ಶುಭದಿನ 28. ಶ್ರೀರಾಜರಾಜೇಶ್ವರಿ ಜಪ ಮಾಡಿರಿ.




ವಾರದ ಆರಂಭದಲ್ಲಿ ಉದ್ಯೋಗ ಸ್ಥಳದಲ್ಲಿ ಏಳ್ಗೆ ಇದೆ. ಮನೆಯಲ್ಲಿ ಸಂತೋಷದ ವಾತಾವರಣ ಇರುತ್ತದೆ. ಎಂಥ ಬಿಡುವಿಲ್ಲದ ಕೆಲಸದ ಮಧ್ಯೆಯೂ ಸಂಗಾತಿ, ಮಕ್ಕಳ ಜೊತೆಗೆ ಸಮಯ ಕಳೆಯಲಿದ್ದೀರಿ. ವಾರದ ಮಧ್ಯ ಭಾಗದಲ್ಲಿ ನಿರೀಕ್ಷೆ ಮಾಡಿದ್ದಕ್ಕಿಂತ ಹೆಚ್ಚಿನ ಅನುಕೂಲ ನಿಮಗೆ ಒದಗಿಬರಲಿದೆ. ಶೈಕ್ಷಣಿಕ ಕ್ಷೇತ್ರದಲ್ಲಿ ನೀವು ಹಾಕಿದ್ದ ಶ್ರಮಕ್ಕೆ ತಕ್ಕ ಫಲ ದೊರೆಯಲಿದೆ. ಶುಭದಿನ 29. ಶ್ರೀರಾಮರಕ್ಷಾಸ್ತೋತ್ರ ಪಠಿಸಿರಿ.




ವಾರದ ಆರಂಭದಲ್ಲೇ ಮನೆಯಲ್ಲಿ ದೇವತಾ ಆರಾಧನೆ. ಸಹೋದರರು ಸಹ ಇದರಲ್ಲಿ ಪಾಲ್ಗೊಳ್ಳಲಿದ್ದಾರೆ. ಅಗತ್ಯ ಇರುವವರಿಗೆ ನೆರವು ಕೂಡ ನೀಡಲಿದ್ದೀರಿ. ಆದಾಯದಲ್ಲಿ ಹೆಚ್ಚಳ ಆಗುವ ಸಾಧ್ಯತೆ ಇದೆ. ಮನೆಯ ವಿಚಾರದಲ್ಲಿ ಗಮನಹರಿಸಬೇಕಾದ ಅಗತ್ಯ ಕಂಡು ಬರುತ್ತದೆ. ವಾರದ ಮಧ್ಯಭಾಗದಲ್ಲಿ ವೃತ್ತಿನಿರತರು ಹೆಚ್ಚು ಚಟುವಟಿಕೆಗಳಲ್ಲಿ ತೊಡಗುವ ಸಾಧ್ಯತೆ ಇದೆ. ಶುಭದಿನ 30. ಸೌಂದರ್ಯ ಲಹರಿ ಪಠಿಸಿರಿ.




ಉದ್ಯೋಗಕ್ಕೆ ಹೊರತಾದ ಕೆಲಸಗಳನ್ನು ಪೂರೈಸುವುದಕ್ಕೇ ವಾರದ ಶುರುವಿನಲ್ಲಿ ಸಮಯ ನೀಡಬೇಕಾಗುತ್ತದೆ. ಹಣ ಹೂಡಿಕೆಯಲ್ಲಿ ಉತ್ತಮ ಪ್ರಗತಿ. ಉದ್ಯೋಗ ಸ್ಥಳದಲ್ಲಿ ಅಂದುಕೊಂಡ ಸ್ಥಾನಮಾನ ದೊರೆಯುತ್ತದೆ. ಹೆಚ್ಚಿನ ಶ್ರಮ ವಹಿಸಬೇಕಾಗುತ್ತದೆ. ಕಾನೂನು ವಿಚಾರಕ್ಕೆ ಸಂಬಂಧಿಸಿದ ಜವಾಬ್ದಾರಿಗಳನ್ನು ಪೂರೈಸಲು ಗಮನ ನೀಡಬೇಕಾಗುತ್ತದೆ. ಶುಭದಿನ 29. ಲಿಂಗಾಷ್ಟಕ ಪಠಿಸಿರಿ




ದಾಂಪತ್ಯ ಜೀವನ ಸಂತೋಷವಾಗಿ ಇರುತ್ತದೆ. ಸಂಬಂಧದಲ್ಲಿ ಬಾಂಧವ್ಯ ಇನ್ನಷ್ಟು ಗಟ್ಟಿಯಾಗುತ್ತದೆ. ವ್ಯಾಪಾರಿ–ಉದ್ಯಮಿಗಳು ಬಹುಕಾಲದ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಿದ್ದೀರಿ. ಇದರಿಂದ ಭವಿಷ್ಯದಲ್ಲಿ ದೊಡ್ಡ ಮಟ್ಟದ ಉಪಯೋಗ ಆಗಲಿದೆ. ಪ್ರವಾಸಕ್ಕೆ ತೆರಳುವ ಸಾಧ್ಯತೆ ಇದೆ. ಆಹಾರ ಪಥ್ಯದಲ್ಲಿ ನಿಗಾವಹಿಸಿ. ಸಾಮಾಜಿಕವಾಗಿ ವರ್ಚಸ್ಸು ಹೆಚ್ಚಾಗಲಿದೆ. ಶುಭದಿನ 27. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




ವಾರದ ಶುರುವಿನಲ್ಲಿ ನಿಮ್ಮ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸಲು ಬಹಳ ಶ್ರಮ ಪಡುತ್ತೀರಿ. ಕೆಲಸಗಳು ಆಗಲಿಲ್ಲ ಅಂದರೂ ನಿಮ್ಮ ಆತ್ಮವಿಶ್ವಾಸದಲ್ಲಿ ಯಾವುದೇ ಕುಂದುಂಟಾಗುವುದಿಲ್ಲ. ಪರಿಚಯಸ್ಥರ ಆಹ್ವಾನದ ಮೇರೆಗೆ ಕಾರ್ಯಕ್ರಮದಲ್ಲಿ ಭಾಗಿ ಆಗಲಿದ್ದೀರಿ. ಮನೆಗೆ ಅಗತ್ಯ ಇರುವ ವಸ್ತುಗಳ ಖರೀದಿಗೆ ಹೆಚ್ಚಿನ ಹಣ ವ್ಯಯ ಮಾಡಲಿದ್ದೀರಿ. ಶುಭದಿನ 01. ವಿಷ್ಣು ಸಹಸ್ರನಾಮ ಪಠಿಸಿರಿ.




ಆದಾಯ ಮೂಲದಿಂದ ಹಣಕಾಸಿನ ಹರಿವು ಹೆಚ್ಚಾಗಲಿದೆ. ಸಾಮಾಜಿಕವಾಗಿ ಸ್ಥಾನಮಾನ ಕೂಡ ಹೆಚ್ಚಲಿದೆ. ಶೈಕ್ಷಣಿಕ ಕ್ಷೇತ್ರದಲ್ಲಿ ಉತ್ತಮವಾದ ಏಳ್ಗೆ ಇದೆ. ಜ್ಞಾನ ಹೆಚ್ಚಿಸಿಕೊಳ್ಳುವುದಕ್ಕೆ ಅವಕಾಶ ದೊರೆಯಲಿದೆ. ವೈವಾಹಿಕ ಜೀವನದಲ್ಲಿ ಸಂತೋಷ ಇರುತ್ತದೆ. ವಾರದ ಅಂತ್ಯಕ್ಕೆ ಬಹಳ ಹತ್ತಿರದ ಸಂಬಂಧಿಗಳನ್ನು ಭೇಟಿ ಆಗಲಿದ್ದೀರಿ. ಶುಭದಿನ 02. ಶ್ರೀಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.




ವಾರದ ಆರಂಭದಲ್ಲಿ ನಿಮ್ಮ ಮೇಲೆ ಒತ್ತಡ ಕಂಡುಬರಲಿದೆ. ನಿಮ್ಮ ಪಾಲಿನ ಕೆಲಸಗಳನ್ನು ವೇಗವಾಗಿ ಪೂರ್ಣಗೊಳಿಸುವಿರಿ. ಮೊದಲ ಮೂರು ದಿನ ಆರೋಗ್ಯವು ಉತ್ತಮವಾಗಿರುತ್ತದೆ. ಸಾಮಾಜಿಕ ಜೀವನದಲ್ಲಿ ವರ್ಚಸ್ಸು ವೃದ್ಧಿಯಾಗಲಿದೆ. ಸಂಗಾತಿಗೆ ಉಡುಗೊರೆ ನೀಡುವ ಬಗ್ಗೆ ಆಲೋಚನೆ ಮಾಡುತ್ತೀರಿ. ಸಂಬಂಧದಲ್ಲಿ ಸುಧಾರಣೆ ಕಾಣಿಸಲಿದೆ. ಶುಭದಿನ 30. ಹನುಮಾನ್ ಚಾಲೀಸ್ ಪಠಿಸಿರಿ.




ವಾರದ ಶುರುವಿನಲ್ಲಿ ಕೆಲವು ಗಂಭೀರ ವಿಚಾರಗಳಲ್ಲಿ ಪ್ರಗತಿ ಇದೆ. ಇದರಿಂದ ಅನುಕೂಲ ಪಡೆದುಕೊಳ್ಳಲು ಪ್ರಯತ್ನಿಸಿ. ಪ್ರತಿಷ್ಠೆಯನ್ನು ಹೆಚ್ಚು ಮಾಡಿಕೊಳ್ಳುವ ಕಡೆಗೆ ಪ್ರಯತ್ನಿಸಿ. ಉದ್ಯೋಗ ವ್ಯಾಪಾರದ ವಿಚಾರಗಳು ಪ್ರಾಶಸ್ತ್ಯ ಪಡೆಯುತ್ತವೆ. ದಾನ ಧರ್ಮಗಳಲ್ಲಿ ನಾನಾ ಬಗೆಯಲ್ಲಿ ಅಡೆತಡೆ ಉಂಟಾಗುತ್ತದೆ. ಈಗಾಗಲೇ ನಿಗದಿಯಾದ ಪ್ರವಾಸ ರದ್ದಾಗಬಹುದು. ಶುಭದಿನ 29. ಆದಿತ್ಯ ಹೃದಯ ಪಠಿಸಿರಿ.




ಹಿಂದೆಂದಿಗಿಂತ ಹೆಚ್ಚು ಸ್ಪರ್ಧಾತ್ಮಕವಾಗಿ ಇರುತ್ತೀರಿ. ಬಹಳ ಶ್ರಮಪಟ್ಟು, ಯಶಸ್ಸು ಪಡೆಯಬೇಕಾಗುತ್ತದೆ. ಈ ವೇಳೆ ಹೆಚ್ಚು ಹಣ ಖರ್ಚು ಮಾಡಲಿದ್ದೀರಿ. ವೈಯಕ್ತಿಕ ಸಂಬಂಧದಲ್ಲಿ ಭಿನ್ನಾಭಿಪ್ರಾಯ ಕಾಣಿಸಿಕೊಳ್ಳಬಹುದು. ವಾರದ ಮಧ್ಯ ಭಾಗದಲ್ಲಿ ವ್ಯಾಪಾರ ವ್ಯವಹಾರದಲ್ಲಿ ಹೊಸ ಅವಕಾಶವೊಂದು ತೆರೆದುಕೊಳ್ಳುತ್ತದೆ. ಆಹಾರ ಪಥ್ಯವನ್ನು ಮುಂದುವರಿಸಿ. ಶುಭದಿನ 28. ಕಾಲಭೈರವನ ಆರಾಧನೆ ಮಾಡಿರಿ.




ನಿಮ್ಮ ಜವಾಬ್ದಾರಿಯನ್ನು ಪೂರೈಸುವುದಕ್ಕಾಗಿಯೇ ಹೆಚ್ಚು ಸಮಯವನ್ನು ಮೀಸಲಿಡಬೇಕಾಗುತ್ತದೆ. ನಿಮ್ಮ ನಡವಳಿಕೆಗೆ ಸಹೋದ್ಯೋಗಿಗಳು ಬಹಳ ಹೆಮ್ಮೆ ಪಡುತ್ತಾರೆ. ನಿಮ್ಮ ಸಾಮಾಜಿಕ ಸ್ಥಾನಮಾನ ಹೆಚ್ಚಲಿದೆ. ಜವಾಬ್ದಾರಿಗಳು ಕೂಡ ಜಾಸ್ತಿ ಆಗಲಿದೆ. ಆದಾಯ ಮೂಲಗಳಿಂದ ಅನುಕೂಲ ಇದೆ. ಹತ್ತಿರದ ಪ್ರದೇಶಗಳಿಗೆ ಪ್ರಯಾಣ ಮಾಡಲಿದ್ದೀರಿ. ಶುಭದಿನ 30. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಭವಿಷ್ಯದ ಬಗ್ಗೆ ನಿರ್ಧರಿಸಲು ವಾರದ ಶುರುವಿನಲ್ಲಿ ಹೆಚ್ಚಿನ ಸಮಯ ನೀಡುತ್ತೀರಿ. ದೂರ ಪ್ರದೇಶಗಳಿಗೆ ಪ್ರಯಾಣ ಮಾಡಬೇಕಾಗುತ್ತದೆ. ನಿಮ್ಮ ಪ್ರಯತ್ನಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ಗಮನ ನೀಡುತ್ತೀರಿ. ಹಣ ಹೂಡಿಕೆಯಲ್ಲಿ ಲಾಭವಾಗುವ ಸಾಧ್ಯತೆ ಇದೆ. ವಾರದ ಅಂತ್ಯಕ್ಕೆ ಸರಿಯುತ್ತಾ ನಿಮ್ಮ ಗಮನ ಪೂರ್ತಿಯಾಗಿ ಮನೆ ಬಗ್ಗೆ ತಿರುಗುತ್ತದೆ. ಶುಭದಿನ 28. ದತ್ತಗುರು ಚರಿತ್ರೆ ಪಠಿಸಿರಿ.